2) ನೀರು ಮತ್ತು ನೈರ್ಮಲೀಕರಣ ವ್ಯವಸ್ಥೆಯಲ್ಲಿ ಸುಧಾರಣೆ

3) ಹಾಲಿ ಇರುವ ಕಾರಾಗೃಹಗಳನ್ನು ನವೀಕರಿಸುವುದು ಮತ್ತು ದುರಸ್ತಿಗೊಳಿಸುವುದು.

4) ಉನ್ನತೀಕರಿಸಿದ ಅಡುಗೆಮನೆ ವೈದ್ಯಾಧಿಕಾರಿಗಳು ಮತ್ತು ವೈದ್ಯಕೀಯ ಸಿಬ್ಬಂದಿಗಳ ಸೇವೆ ಹೆಚ್ಚಿಸುವಿಕೆ ಮತ್ತು ವೈದ್ಯಕೀಯ ಉಪಕರಣಗಳ ಪೂರೈಕೆ ಸರ್ಕಾರೇತರ ಸಂಘ ಸಂಸ್ಥೆಗಳು/ವೈದ್ಯಕೀಯ ಕಾಲೇಜುಗಳ ಸಹಯೋಗದೊಂದಿಗೆ ವೈದ್ಯಕೀಯ ತಪಾಸಣೆ ಶಿಬಿರಗಳನ್ನು ಆಯೋಜಿಸುವುದು.

ಇ) ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ:–

- ನಗರಗಳ ಹೃದಯ ಭಾಗದಲ್ಲಿರುವ ಹಳೆಯ ಬಂದೀಖಾನೆಗಳನ್ನು ಹೊಸ ಕಟ್ಟಡಗಳಿಗೆ ಸ್ಥಳಾಂತರಿಸುವುದು. ಈಗಾಗಲೇ 9 ಬಂದೀಖಾನೆಗಳನ್ನು ಹೊಸ ಕಟ್ಟಡಗಳಿಗೆ ಸ್ಥಳಾಂತರಿಸಲಾಗಿದೆ.
- ಹೆಚ್ಚುವರಿಯಾಗಿ ಅನೆಕ್ಸ್ ಮತ್ತು ಬ್ಯಾರಕ್‌ಗಳ ನಿರ್ಮಾಣ.
- ನೀರು ಸರಬರಾಜು ಮತ್ತು ನೈರ್ಮಲ್ಯ ಉತ್ತಮಪಡಿಸುವಿಕೆ.
- ಬಂದಿಗಳ ಪುರೋಭಿವೃದ್ಧಿಗಾಗಿ ಅವರು ಬಂಧನದಲ್ಲಿರುವ ಅವಧಿಯಲ್ಲಿ ವಿವಿಧ ವೃತ್ತಿಪರ ಶಿಕ್ಷಣದಲ್ಲಿ ತರಬೇತಿ ನೀಡಿಕೆ.
- ಕೆಲಸ ಮಾಡುವ ಬಂದಿಗಳಿಗೆ ನೀಡಲಾಗುತ್ತಿರುವ ಮಜೂರಿ ದರದಲ್ಲಿ ಹೆಚ್ಚಳಿಕೆ.
- ಮನಪರಿವರ್ತನೆಗಾಗಿ ವಿವಿಧ ಧಾರ್ಮಿಕ ಗುರುಗಳಿಂದ ಪ್ರವಚನ, ನೀತಿ ಬೋಧನೆ ಮತ್ತು ಪರಿವರ್ತನಾ ಶಿಬಿರಗಳು ಹಮ್ಮಿಕೊಳ್ಳಲಾಗುತ್ತಿದೆ.
- ಹೆಚ್ಚಿನ ವ್ಯಾಸಾಂಗಕ್ಕಾಗಿ ಉತ್ತೇಜನ ಮತ್ತು ಸರ್ಕಾರದ ಖರ್ಚಿನಲ್ಲಿ ವಿದ್ಯಾಭ್ಯಾಸ ಮಾಡಲು ಅವಕಾಶ.

ಬೆಂಗಳೂರು ನಗರದ ಸರ್ಕಾರಿ ಬಹುಮಹಡಿ ಕಟ್ಟಡಗಳಲ್ಲಿರುವ ಲಿಫ್ಟ್‌ಗಳು

207(554) ಶ್ರೀ ನರೇಂದ್ರ ಬಾಬು ನೆ ಲ:(ಮಹಾಲಕ್ಷ್ಮಿ ಲೇಔಟ್) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸರ್ಕಾರಿ ಬಹುಮಹಡಿ ಕಟ್ಟಡಗಳಲ್ಲಿ ಅಳವಡಿಸಿರುವ ಲಿಫ್ಟ್‌ಗಳು ಆಗಿಂದಾಗ್ಗೆ ಕೆಟ್ಟು ಮಧ್ಯದಲ್ಲಿ ನಿಲ್ಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿಶ್ವೇಶ್ವರಯ್ಯ ಮುಖ್ಯ ಗೋಪುರದಲ್ಲಿ ಯಾವಾಗ ಲಿಫ್ಟ್‌ಗಳನ್ನು ಅಳವಡಿಸಲಾಗಿದೆ. ಅವುಗಳು ಸುಮಾರು 29 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುತ್ತವೆ.

ಇ) ವಿಶ್ವೇಶ್ವರಯ್ಯ ಮುಖ್ಯ ಗೋಪುರದಲ್ಲಿ ಅಳವಡಿಸಿರುವ ಲಿಫ್ಟ್‌ಗಳು ಪದೇ ಪದೇ ಕೆಟ್ಟು ನಿಲ್ಲುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಬದಲಾಯಿಸಲು ಸರ್ಕಾರ ಆಲೋಚಿಸಿದೆಯೇ;

ಈ) ಹಾಗಿದ್ದಲ್ಲಿ ಬದಲಾವಣೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಉ) ಪ್ರತಿ ವರ್ಷ ಅಳವಡಿಸುತ್ತಿರುವ ಲಿಫ್ಟ್‌ಗಳನ್ನು ಯಾರು ಪರಿಶೀಲಿಸುತ್ತಾರೆ?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) & ಇ) ವಿಶ್ವೇಶ್ವರಯ್ಯ ಮುಖ್ಯ ಗೋಪುರದಲ್ಲಿ ಲಿಫ್ಟ್‌ಗಳು ಕೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ವಿಶ್ವೇಶ್ವರಯ್ಯ ಮುಖ್ಯ ಗೋಪುರದ 2 ಲಿಫ್ಟ್‌ಗಳನ್ನು ಬದಲಾಯಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಹಾಗೂ ಉಳಿದ ಲಿಫ್ಟ್‌ಗಳನ್ನು ಬದಲಾಯಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ) ಸದರಿ ಕಟ್ಟಡದಲ್ಲಿರುವ ಲಿಫ್ಟ್‌ಗಳನ್ನು ಬದಲಾವಣೆ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ 2 ಲಿಫ್ಟ್‌ಗಳನ್ನು ಬದಲಾಯಿಸಲು ಕಾಮಗಾರಿ ಆದೇಶದಂತೆ ಲಿಫ್ಟ್ ಕಂಪನಿಯವರು ಲಿಫ್ಟ್ ಉಪಕರಣಗಳನ್ನು ಸರಬರಾಜು ಮಾಡಲಾಗಿದ್ದು ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಬಾಕಿ 2 ಲಿಫ್ಟ್‌ಗಳನ್ನು ಬದಲಾಯಿಸಲು ಆಡಳಿತಾತ್ಮಕ ಅನುಮೋದನೆ ನೀಡುವುದರಿಂದ ಟೆಂಡರ್ ಅನ್ನು ಕರೆಯಲಾಗಿದೆ.

ಉ) ಕರ್ನಾಟಕ ಮುಖ್ಯ ವಿದ್ಯುತ್ ಪರಿವೀಕ್ಷಣಾಧಿಕಾರಿಗಳ ಕಛೇರಿಯಿಂದ ಪರಿಶೀಲಿಸಲ್ಪಡುತ್ತದೆ.

ಬಿತ್ತನೆ ವಿತರಣೆ